ಡಾ.ಭೀಮಣ್ಣ ಘನಾಥೆ
ಸರಕಾರಿ ಮಹಿಳಾ ಪ್ರತಮ ದರ್ಜೆ ಕಾಲೇಜ
ಕಲಬುರಗಿ

# ಅಸಹಕಾರ ಚಳುವಳಿ

1. ಪೀಠಿಕೆ
2. ಕಾರಣಗಳು
3. ಅಸಹಕಾರ ಚಳುವಳಿಯ ಉದ್ದೇಶ ಬೇಡಿಕೆಗಳು
4. ಚಳುವಳಿಯ ರೂಪರೇಷಗಳು.
5. ಚಳುವಳಿಯ ಘಟನೆಗಳು.
6. ಚೌರಿ-ಚೌರ ಘಟನೆಗಳು.
7. ಚಳುವಳಿಯ ನಿಲುಗಡೆ
8. ಪರಿಣಾಮಗಳು
9. ಉಪಸಂವಾರ

ಪೀಠಿಕೆ ;- ಸ್ವಾತಂತ್ರ್ಯ ಯ ಹೋರಾಟದ ಮೂರನೇಯ ಹಂತವು ಮಹಾತ್ಮ ಗಾಂದಿಜಿಯವರ ನಾಯಕತ್ವದಲ್ಲಿ ನಡೆದ ಪ್ರ ಪ್ರಥಮ ರಾಷ್ಟ್ರಮಟ್ಟದ ಹೋರಾಟವಾಗಿದೆ. ಇದು ಹಿಂದು-ಮುಸ್ಲಿ೦ರ ಐಕ್ಯತೆಯ ಹೋರಾಟವಾಗಿದೆ.

**ಅಸಹಕಾರ ಚಳುವಳಿಯ ಕಾರಣಗಳು.**

೧.) ೧೯೧೯ರ ಮಾಂಟೆಗ್ಯೂ ಚಲ್ಮಸ್  ಫೋರ್ಡನ ಸುಧಾರಣೆಯ ವಿರೋಧಕ್ಕಾಗಿ

೨.) ಮೊದಲನೇಯ ಮಹಾಯುದ್ಧ ಕಾಲಕ್ಕೆ ಬ್ರಿಟಿಷರು ನೀಡಿದ್ದಭರವಸೆಗಳು ಹುಸಿಯಾದದುಕ್ಕೆ

೩.) ರೌಲತ್ ಕಾಯ್ದೆಯ ವಿರೋಧಕ್ಕಾಗಿ

೪.) ಲಾಹೋರದ ಅಮೃತಸರ್‌ದ ಜಲಿಯನ್ ವಾಲ್ ಬಾಗ್ ದುರಂತಕ್ಕೆ ಬ್ರಿಟಷರ ದೌರ್ಜನ್ಯದ ವಿರೋಧಕ್ಕಾಗಿ
(೧೯೧೯ ಎಪ್ರಿಲ್ ೧೩) ಡಾ|| ಸತ್ಯಪಾಲ ಡಾ|| ಕಿಚ್ಲೆ

೫.) ಖಲೀಫನ ಪದಚ್ಯುತಿ ಮಾಜದ್ದಕ್ಕಾಗಿ

**ಅಸಹಕಾರ ಚಳುವಳಿಯ ಉದ್ದೇಶ ಬೇಡಿಕೆಗಳು**

೧.) ಪಂಜಾಬಿನ ಜಲಿಯನ್‌ವಾಲ್‌ಬಾಗ್ ದುರಂತಕ್ಕೆಕಾರಣರಾದ  ಅಪರಾಧಿಗಳನ್ನು ಶಿಕ್ಷಿಸುವದು.

೨.) ಟರ್ಕಿಯಲ್ಲಿ ಖಿಲಾಫತ್ ಅಂದರೆ ಖಲೀಫನ ಧಾರ್ಮಿಕ ಆಳ್ವಿಕೆಯನ್ನು ಪುನರ್ ಸ್ಥಾಪಿಸುವದು.

೩.) ಒಂದು ವರ್ಷದಲ್ಲಿ ಸ್ವರಾಜ್ಯ ಪಡೆಯುವುದು. ಅಂದರೆ ಭಾರತಿಯರನ್ನು ಗವರ್ನರ್ ಜನರಲ್ (ವೈಸರಾಯ್) ಆಗಿ ನೇಮಕ ಮಾಡುವಂತೆ ಮಹಾರಾಣಿಯನ್ನು ಒತ್ತಾಯಿಸುವದು

**ಚಳುವಳಿಯ ರೂಪರೇಷಗಳು.**

೧೯೨೦ ಸಪ್ಟಂಬರ್ ೪ ರ ಕಲ್ಕತ್ತಾದ ಕಾಂಗ್ರೇಸ್ ಅಧಿವೇಶನದಲ್ಲಿ ಅಧ್ಯಕ್ಷರಾದ ಲಾಲಾಲಜಪತ್ ರಾಯರು ಮಹಾತ್ಮಗಾಂಧಿಯವರ ನಾತಕತ್ವದಲ್ಲಿ ಅಸಹಕಾರ ಚಳುವಳಿಯನ್ನು ನಡೆಸಲು ೧೮೫೫-೮೭೩ ಮತಗಳಿಂದ ಅಂಗಿಕರಿಸಲಾಯಿತು.

೧.) ಚಳುವಳಿಯು ಸಂಪೂರ್ಣವಾಗಿ ಸತ್ಯ-ಅಹಿಂಸೆ-ಶಾ೦ತಿ ನೀತಿಯನ್ನು ಅವಲಂಬಿಸಬೇಕು

೨.) ಬ್ರಟಿಷ ಸರಕಾರ ನೀಡಿದ್ದ ಬಿರುದು, ಪಿಂಚಣಿ, ಮತ್ತು ಗೌರವಸ್ಥಾನಗಳನ್ನು ಬಿಟ್ಟುಕೊಡುವದು.

೩.) ಸರಕಾರಿ ವಿದ್ಯಸಂಸ್ಥೆಗಳಾದ ಶಾಲಾ-ಕಾಲೇಜುಗಳು, ವಿಶ್ವವಿದ್ಯಾಲಯಗಳನ್ನು ವಿದ್ಯಾರ್ಥಿಗಳು ಬಹಿಷ್ಕರಿಸಬೇಕು.

೪.) ವಕೀಲರು ನ್ಯಾಯಲಯಗಳನ್ನು ಬಹಿಷ್ಕರಿಸಬೇಕು.

೫.) ರಾಜಕಾರಣಿಗಳು ಬ್ರಿಟಿಷರ ಚುನಾವಣೆ ಮತ್ತು ಶಾಸನಸಭೆಗಳ ಸದ್ಯಸತ್ವಕ್ಕೆ ರಾಜೀನಾಮೆ ನೀಡಬೇಕು.

೬.) ಬ್ರಿಟಿಷ ಸರಕಾರದ ಹಾಗೂ ಸೈನ್ಯದ ನೌಕರಿಗಳನ್ನು ತ್ಯಾಜಿಸಬೇಕು.

೭.) ವಿದೇಶಿವಸ್ತುಗಳನ್ನು ಮತ್ತು ವಸ್ತ್ರಗಳನ್ನು ಬಹಿಷ್ಕರಿಸುವದು

೮.) ಜ್ಯೂರಿ, ಪುರಸಭೆ, ನಗರಸಭೆ, ಕಾರ್ಪೋರೇಷನ್, ಮತ್ತು ಮುಂತಾಸ ಸ್ಥಳಿಯ ಸರಕಾರದಲ್ಲಿ ನಾಮಕರಣಗೊಂಡ ಸದ್ಯಸ್ಯರು ತಮ್ಮ ಸ್ಥಾನಮಾನಗಳನ್ನು ಬಿಟ್ಟುಕೊಡುವದು.

೯.) ಬ್ರಿಟಿಷರ ಕಾರಖಾನೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರು ತಮ್ಮ ಕೆಲಸಗಳಿಗೆ ರಾಜೀನಾಮೆ ನೀಡಬೇಕು.

೧೦.) ಅಡಿಗೆ ಮಾಡುವವರು, ಅಗಸರು, ಚಮ್ಮಾರರು, ಕ್ಷೌರಿಕರು ಮತ್ತು ಮುಂತಾದವರು ಬ್ರಿಟಿಷರ ವ್ಯಯಕ್ತಿಕ ಸೇವೆಯನ್ನು ತಿರಷ್ಕರಿಸಬೇಕು.

**ಚಳುವಳಿಯ ಘಟನೆಗಳು.**

೧.) ೯೦,೦೦೦ ವಿದ್ಯಾರ್ಥಿಗಳು ತಮ್ಮ ಶಾಲಾ-ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಬಹಿಷ್ಕರಿಸಿದರು. ಮತ್ತು ಅವರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಶಿಕ್ಷಣಕೇಂದ್ರಗಳನ್ನು ವಾರಣಾಸಿ, ಕಲ್ಕತ್ತಾ, ಡಾಕಾ, ಲಾಹೋರ, ಜಯಪುರ, ಗುಜರಾತ, ಅಹಮದನಗರ, ಅಲಹಾಬಾದ ಇನ್ನೂ ಮುಂತಾದ ಸ್ಥಳಗಳಲ್ಲಿ ಪ್ರಾರಂಬಿಸಲಾಯಿತು.

೨.) ೭೫%-೮೦%ರಷ್ಟುಜನ ಮತದಾರರು ಕೌನ್ಸಿಲ್ ಚುನಾವಣೆಯಲ್ಲಿ ಭಾಗವಹಿಸಲಿಲ್ಲ

೩.) ೩೦೦೦ ವಕೀಲರು ತಮ್ಮ ವೃತ್ತಿಯನ್ನು ಮತ್ತು ನ್ಯಾಯಾಲಯಗಳನ್ನು ಭಹಿಷ್ಕರಿಸಿದರು. ಅವರಲ್ಲಿ ಸಿ.ಆರ್.ದಾಸ್, ಎಮ್.ಆರ್.ಜಯಕರ್, ವಲ್ಲಭ ಬಾಯಿ ಪಟೇಲ್, ರಾಜಗೋಪಾಲಚಾರ್ಯ, ಮೋತಿಲಾಲ ನೆಹರು, ಜವಹರಲಾಲ್ ನೆಹರು,

೪.) ಬ್ರಿಟಿಷ ಸರಕಾರದಿಂದ ಪಡೆದ ಗೌರವ-ಪದವಿಗಳನ್ನು ವಾಪಸ ನೀಡಲಾಯಿತು. ಮಹಾತ್ಮಗಾಂಧಿಜಿಯವರು ಕೆಸರ್-ಎ-ಹಿಂದ್, ಮತ್ತು ಜೂಲೂ ಬೋಯರ್ ಪದವಿಯನ್ನು, ರವೀದ್ರನಾಥಟ್ಯಾಗೊರ್, ಸರ್ ಪದವಿಯನ್ನು ಹೀಗೆ ಅನೇಕರು ತಾವು ಪಡೆದ ಗೌರವ-ಪದವಿಗಳನ್ನು ವಾಪಸ ನೀಡಿದರು.

೫.) ಸುಭಾಸಚಂದ್ರಭೋಷ್ ರು ಕಲೇಕ್ಟರ್ ಹುದ್ದೆ ಬಿಟ್ಟಂತೆ ಸುಮಾರು ೨೦೦೦ಜನ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದರು.

೬.) ಚಳುವಳಿಯ ಪ್ರಸಾರದ ವೆಚ್ಚಕ್ಕಾಗಿ ವ್ಯಾಪರಸ್ಥರು, ಕಾರ್ಮಿಕರು, ಕೂಲಿಕಾರರು, ಮತ್ತು ಮಹಿಳೆಯರು ತಮ್ಮ ಹಣ, ಅಭರಣಗಳನ್ನು ನೀಡಿದರು. ಒಟ್ಟು ೪ ಕೋಟಿ ರೂಪಾಯಿ ನಿಧಿ ಸಂಗ್ರಹಿಸಲಾಯಿತು.

೭.) ವಿದೇಶಿ ವಸ್ತು ಮತ್ತು ವಸ್ತ್ರಗಳನ್ನು ಭಹಿಷ್ಕರಿಸಿದ್ದರಿಂದ ಬ್ರಿಟಿಷ ಸರಕಾದ ಆದಾಯವು ೧೯೨೦-೨೧ ರಲ್ಲಿ ೧೦೮ ಕೋಟಿ ರೂ. ಇದ್ದದ್ದು ೧೯೨೧-೨೨ರಲ್ಲಿ ೩೨ಕೋಟಿ ರೂಗಳಿಗೆ ಇಳಿಮುಖವಾಯಿತು.

೮.) ಖಾದಿ ಉತ್ಪಾದನೆಗಳು ಹಾಗೂ ಭಾರತಿಯ ಬಟ್ಟೆ ಕಾರ್ಖಾನೆಗಳಾದ ಮುಂಬೈ, ಸೂರತ್, ಕಲ್ಕತ್ತಾ, ಕೈಗಾರಿಕೆಗಳು ವಿಪರೀತ ಲಾಭ ಗಳಿಸಿದವು, ಕಲ್ಕತ್ತಾ ಒಂದರಲ್ಲಿಯೇ ೧೦೦ ಕ್ಕೂ ಹೆಚ್ಚು ಹೊಸ ಬಟ್ಟೆ ಕಾರ್ಖಾನೆಗಳು ಪ್ರಾರಂಬವಾದವು.

೯.) ಬ್ರಿಟಿಷ ಯುವರಾಜ ಪ್ರಿನ್ಸ್ ವೇಲ್ಸ್ ೧೯೨೧ ನವಂಬರ ೧೭ ರಂದು ಬ್ರಿಟಿಷ ಸರಕಾದೊಂದಿಗೆ ಭಾರತೀಯರು ಸೌಹಾರ್ಧತೆ ಮೂಡಿಸಲು ಮುಂಬೈಗೆ ಬಂದಿಳಿದ ಅವನಿಗೆ ಸ್ವಾಗತದ ಬದಲಾಗಿ ಹರತಾಳ, ಪಿಕಟಿಂಗ್ ಮೂಲಕ ಬಹಿಷ್ಕಾರ ಹಾಕಲಾಯಿತು. ಈ ಪ್ರಕರಣದಲ್ಲಿ ೬ ಸಾವಿರ ಜನರನ್ನು ಬಂಧಿಸಿ, ಸರೆಮನೆಗೆ

೧೦.) ೧೧೫೩ ಜನರು ಬ್ರಿಟಿಷರ ಗುಂಡಿಗೆ ಬಲಿಯಾದರು.

೧೧.) ಹಿಂದು-ಮುಸ್ಲೀ0 ರ ಮದ್ಯ ಜಗಳ ತರಲು, ಮಸೀದಿಯಲ್ಲಿ ಹಂದಿಯನ್ನು ಕೊಂದು-ಇದು ಹಿಂದುಗಳ ಕೃತ್ಯವೆಂತಲೂ ಅನೇಕ ಹಿಂದುಗಳನ್ನು ಬಂದಿಸಿದರು.

೧೨.) ದೇವಸ್ಥಾನದಲ್ಲಿ ಮೂರ್ತಿಗಳನ್ನು ಬಂಜಿಸಿ ಅದು ಮುಸ್ಲೀಂರ ಕೃತ್ಯ ಎಂದು ಅನೇಕ ಮುಸ್ಲೀಂರನ್ನು ಬಂದಿಸಿದರು.

೧೩.) ಬಹುದಿನಗಳಿಂದ ಮುಚ್ಚಿದ ಅಯೋದ್ಯಯ ರಾಮಮಂದಿರ ಪೂಜೆಗೆ ಅವಕಾಶ ನೀಡಿ, ಕೋಮುಗಲಭೆ ಅವಕಾಶ ಮಾಡಿದರು.

೧೪.) ಕಾಂಗ್ರೇಸಿನ ನಾಯಕರಾದ ಸಿ.ಆರ್.ದಾಸ, ಲಾಲ ಲಜಪತರಾಯ, ನೆಹರು, ಗಾಂಧೀಜಿ, ಅನಿಬೆಸಂಟ, ಸುಭಾಸಚಂದ್ರಭೋಸ್ ವಲ್ಲಭ ಬಾಯಿ ಪಟೇಲ್, ಇನ್ನೂ ಮುಂತಾದ ಒಟ್ಟು ೬೦-೮೦ ಸಾವಿರ ಜನರನ್ನು ಬಂಧಿಸಿ ಸರೆಮನೆಗೆ ತಳ್ಳಲಾಯಿತು

ಸರೆಮನೆಗೆ ಹೋಗುವದು ಒಂದು ಪವಿತ್ರ ಕಾರ್ಯಯಾಯಿತು. ಸರೆಮನೆಯಿಂದ ಬಿಡುಗಡೆಯಾದವರಿಗೆ ಸಮಾಜದಲ್ಲಿ ಅತ್ಯಂತ ಗೌರವ ಲಭಿಸಿತು,ಸರೆಮೆನೆಗೆ ಹೋಗುವದು ದೇವಸ್ಥಾನದ ಸೇವೆಗಾಗಿ ಅನ್ನುವ ಮನೊಭಾವ ಬೆಳೆಯಿತು.

**ಚೌರಿ-ಚೌರ ಘಟನೆಗಳು. ೦೫/೦೨/೧೯೨೨**

ಉತ್ತರಪ್ರದೇಶದ ಗೋರಕಪುರ ಜಿಲ್ಲೆಯ ಚೌರಿಚೌರ ಎಂಬ ಸ್ಥಳದಲ್ಲಿ ಅಸಹಕಾರ ಚಳುವಳಿಯ ಭಾಗವಾದ ಕರನಿರಾಕರಣೆ ಚಳುವಳಿಯನ್ನು ಅಲ್ಲಿಯ ರೈತರು ಶಾಂತಿಯುತವಾಗಿ ನಡೆಸುತ್ತಿದ್ದರು. ೩೦೦೦ ಜನ ರೈತರು ಶಾಂತಿಯುತವಾಗಿ ಗಾಂಧೀಜಿಯ ಅಹಿಂಸ ಮಾರ್ಗದಲ್ಲಿ ಹರತಾಳ ಮೆರವಣಿಗೆಯನ್ನು ನಡೆಸುತ್ತಿದ್ದರು ಆದರೆ ಕಿಲಿಗೇಡಿ ಪೋಲಿಸರು ಮೆರವಣಿಗೆಯ ಹಿಂದಿರುವ ಕೇಲ ನಾಯಕರನ್ನು ಬೂಟ್ ಗಾಲಿನಿಂದ ಒದ್ದು ಕೇರಳಿಸಿದರು. ಅವರು ವಿರೋಧಿಸಿದಾಗ ಅವರ ಮೇಲೆ ಲಾಠಿಚಾರ್ಜ ಮಾಡಿದರು. ಇದರಿಂದ ರೊಚ್ಚಿಗೆದ್ದ ಜನ ಕಲ್ಲು ತೂರಲು ಪ್ರಾರಂಬಿಸಿದರು. ಪೋಲಿಸರು ಗುಂಡು ಹಾರಿಸಿದರು. ೨ ಜನ ಮರಣ ಹೊಂದಿ ೮ ಜನ ಗಾಯಗೊಂಡರು. ಪೋಲಿಸರ ಹತ್ತಿರ ಗುಂಡುಗಳು ಮುಗಿದವು. ಹೆದರಿದ ಇನ್‌ಸ್ಪೆಕ್ಟರ್ ಸೇರಿ ೨೮ ಜನ ಪೋಲಿಸರು ಠಾಣೆಯಲ್ಲಿ ಅಡಗಿ ಕುಳಿತರು ರೊಚ್ಚಿಗೆದ್ದ ಜನ ಪೋಲಿಸ ಠಾಣೆಗೆ ಮುತ್ತಿಗೆ ಹಾಕಿ ಬೆಂಕಿ ಹಚ್ಚಿದರು. ೨೨ ಜನ ಪೋಲಿಸರು ಸಜೀವ ದಹನಗೊಂಡರು.

**ಚಳುವಳಿಯ ನಿಲುಗಡೆ ೧೨/೦೨/೧೯೨೨**

೧.) ಈ ಘಟನೆಯಿಂದ ಸತ್ಯ ಅಹಿಂಸೆ ಶಾಂತಿಯಿ೦ದ ಕೂಡಿರಬೇಕಾದ ಚಳುವಳಿಯು ಹಿಂಸೆಗೆ ತಿರುಗಿದ್ದರಿಂದ ಹಾಗೂ

೨) ದೇಶದ ಹಲವಡೆ ಕೋಮುಗಲಭೆ ಪ್ರಾರಂಬವಾಗಿದ್ದರಿ೦ದಲೂ ಗಾಂಧಿಜೀಯು ಅಸಹಕಾರ ಚಳುವಳಿಯನ್ನು ೧೨/೦೨/೧೯೨೨ ರಂದು ಹಾಟತ್ತನೆ ನಿಲ್ಲಿಸಿದರು.

**ಪರಿಣಾಮಗಳು**

೧.) ಗಾಂಧಿಜೀಯವರು ಅಸಹಕಾರ ಚಳುವಳಿಯನ್ನು ಹಟಾತ್ತನೆ ನಿಲ್ಲಿಸಿದ್ದರಿಂದ ಇತರ ಅನೇಕ ಕಾಂಗ್ರೇಸ ನಾಯಕರಿಂದ ಟೀಕೆಗೆ ಒಳಗಾದರು. ಚಳುವಳಿಯಲ್ಲಿ ಭಾಗವಹಿಸಿದ್ದ ಅನೇಕರು ನಿರಾಶೆಗೊಂಡರು

೨.) ಸಿ.ಆರ್.ದಾಸ, ಮೋತಿಲಾಲನೆಹರು, ಎನ್.ಸಿ. ಕೇಲಕರ್, ಅಜಮಲ್‌ಖಾನ, ಮತ್ತು ತೇಜಬಹೂದ್ದರು ಸಪ್ರು, ಮುಂತಾದವರು ಕಾಂಗ್ರೇಸನಿ೦ದ ಹೋರನಡೆದು ಸ್ವರಾಜ್ಯ ಎಂಬ ನೂತನ ಪಕ್ಷ ೧೯೨೩ ರಲ್ಲಿ ಸ್ಥಾಪಿಸಿದರು.

೩.) ಗಾಂಧಿಜಿಯವರ ಈ ನೀತಿಯಿಂದ ಅನೇಕ ಜನರ ತ್ಯಾಗ-ಬಲಿದಾನವು ವ್ಯರ್ಥವಾಯಿತು. ಎಂದು ಸುಭಾಸಚಂದ್ರಭೋಸರು ಟೀಕಿಸಿದರು '

೪.) ಖಿಲಾಫತ್ ಟರ್ಕಿ ದೇಶದ ಧಾರ್ಮಿಕ ನಾಯಕನಿಗೆ ಅನ್ಯಾಯವಾದರೆ, ಭಾರತದಲ್ಲಿ ಮುಸ್ಲೀಂರ ಜೋತೆ ಹೋರಾಟ ಮಾಡುವದು ಎಷ್ಟು ಸೂಕ್ತ.

ಹಾಗೂ ಈ ಚಳುವಳಿಯ ನಾಯಕತ್ವವನ್ನು ಮತಾಂದರಾದ ಶೌಕತಅಲಿ ಮತ್ತು ಮಹಮ್ಮದಅಲಿಗೆ ವಹಿಸಿಕೊಟ್ಟಿದ್ದು, ರಾಷ್ಟ್ರೀಯವಾದಿ ಕಾಂಗ್ರೇಸಿನ ನೀಷ್ಠ ಕಾರ್ಯಕರ್ತ ಮಹಮ್ಮದಅಲಿ ಜಿನ್ನಾ ಗಾಂದಿಜಿಯ ನೀತಿಯನ್ನು ಟೀಕಿಸಿ, ಕಾಂಗ್ರೇಸನ್ನು ತ್ಯಾಜಿಸಿ, ಭಾರತವನ್ನು ಬಿಟ್ಟು ಲಂಡನ್ ನಲ್ಲಿ ವಕೀಲ ವೃತ್ತಿಯನ್ನು ಮಾಡುತ್ತ ನೆಲಸಿದರು.

೫.) ಬ್ರಿಟಿಷರು ತಮ್ಮ ಶಕ್ತಿಗೆ ಹಾಗೂ ತಮ್ಮ ನೀತಿಗೆ ಜಯವಾಯಿತು ಎಂದು ಪ್ರಚಾರ ಪಡಿಸಿದರು.

೬.) ಸಾವಿರಾರು ಜನ ಸರೆಮನೆ ಸೇರಿದ ನಾಯಕರಿಗೆ ನಿರಾಸೆಯಾಯಿತು.

" ಒಂದು ಚಿಕ್ಕ ಹಳ್ಳಿಯ ಜನಕೈಗೊಂಡ ದುರ್ವರ್ತನೆಗೆ ಇಡೀ ದೇಶವೆ ಬೆಲೆ ಕೊಡಬೇಕಾದ ನೀರ್ಣಯ ತಪ್ಪುನೀತಿಯಾಗಿತ್ತು." ಎಂದು ಲಾಲ ಲಜಪತ್ ರಾಯ ಟೀಕಿಸಿದರು.

**ಉಪಸಂವಾರ**

೧.) ಗಾಂಧೀಜಿಯವರ ನಾಯಕತ್ವದ ಮೊಟ್ಟಮೊದಲ ರಾಷ್ಟ್ರೀಯ ಹೋರಾಟವಾಗಿತ್ತು.

೨.) ಎಲ್ಲಾ ಜಾತಿಯ, ಎಲ್ಲಾ ಪ್ರಾಂತದ, ಎಲ್ಲಾ ಭಾಷೆಯ ಭಾರತದ ಸಾಮೋಹಿಕ ಹೋರಾಟವಾಗಿತ್ತು.

೩.) ಸತ್ಯ ಅಹಿಂಸೆ ಶಾಂತಿಯ ಮೂಖಾಂತರ ಬ್ರಿಟಿಷ ಸರಕಾರದ ಎದೆ ನಡುಗಿಸಿದ್ದು ಮುಂದಿನ ಹೋರಾಟಕ್ಕೆ ಪ್ರೇರಣೆಯಾಯಿತು.

೪.) ಈ ಹೋರಾಟದಿಂದ ಗಾಂದೀಜಿಯವರು ಪ್ರಶ್ನಾತೀತ ರಾಷ್ಟ್ರೀಯ ನಾಯಕರಾಗಿ ಮಹಾತ್ಮ ಎಂದು ಕರೆಯಿಸಿಕೊಂಡರು.